JSS MAHAVIDYAPEETHA
JSS SCIENCE AND TECHNOLOGY UNIVERSITY
SRI JAYACHAMARAJENDRA COLLEGE OF ENGINEERING
JSS SCIENCE AND TECHNOLOGY UNIVERSITY MYSURU
- Constituent College of JSS Science and Technology University
- Approved by A.I.C.T.E
- Governed by the Grant-in-Aid Rules of Government of Karnataka
- Identified as lead institution for World Bank Assistance under TEQIP Scheme

ಜೆಎಸ್‌ಎಸ್‌ಎಸ್‌ಟಿಯು/ವಿವೇ/2020-21 ದಿನಾಂಕ: 28.01.2021

## ಜ್ಞಾಪನೆ

ವಿಷಯ: 2020-21 ನೇ ಸಾಲಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯವರು ನಮ್ಮ ಕಾಲೇಜಿನಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಬಿ.ಇ / ಬಿಸಿಎ / ಎಂ.ಟೆಕ್ / ಎಂಸಿಎ / ಎಂಬಿಎ / ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಂದ 2020-21 ನೇ ಸಾಲಿಗೆ ವಿದ್ಯಾರ್ಥಿವೇತನ ನೀಡಲು ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ. ವಿದ್ಯಾರ್ಥಿಗಳು Online (WWW.ssp.karnataka.gov.in) ನಲ್ಲಿ ಅರ್ಜಿಗಳನ್ನು ಹಾಕಬೇಕಾಗಿದ್ದು ದಿನಾಂಕ 01.02.2021 ರಿಂದ ಕಾಲೇಜಿನ Digital Libraryಯಲ್ಲಿ ಅರ್ಜಿಗಳನ್ನು ಹಾಕಲು ವ್ಯವಸ್ಥೆ ಮಾಡಲಾಗಿದ್ದು ವಿದ್ಯಾರ್ಥಿಗಳು ಬಂದು Apply ಮಾಡಬೇಕೆಂದು ಕೋರಲಾಗಿದೆ. ಈ ಸಂಬಂಧ ಪ್ರಕಟಣೆ ಪತ್ರ ಒಂದನ್ನು ಇಲಾಖೆಯವರು ಕಳುಹಿಸಿದ್ದ ಪ್ರತಿ ಲಗತ್ತಿಸಲಾಗಿದೆ.

<u>ವಿದ್ಯಾರ್ಥಿಗಳು ಈ ಕೆಳಕಂಡ ದಾಖಲಾತಿಗಳನ್ನು **Online** ನಲ್ಲಿ **Upload** ಮಾಡಲು ಸೂಚಿಸಲಾಗಿದೆ ಹಾಗೂ ದಾಖಲಾತಿಗಳನ್ನು **E-attestation** ಅಧಿಕಾರಿಗಳಿಂದ ದೃಢೀಕರಿಸಬೇಕಾಗಿರುತ್ತದೆ.</u>

1. ಹಿಂದಿನ ವರ್ಷದ 2 ಸೆಮಿಸ್ಟರ್‌ನ ಅಂಕಪಟ್ಟಿ
2. ವ್ಯಾಸಂಗ ಪ್ರಮಾಣಪತ್ರ
3. ಶುಲ್ಕ ಪಾವತಿ ರಶೀದಿ
4. ಆಧಾರ್ ಕಾರ್ಡ್
5. ಬ್ಯಾಂಕ್ ಪಾಸ್ ಬುಕ್ (ಆಧಾರ್ ಕಾರ್ಡ್ ಲಿಂಕ್ ಮಾಡಿರುವುದು ಮಾತ್ರ)
6. ಆದಾಯ ಮತ್ತು ಜಾತಿ ಪ್ರಮಾಣ ಪತ್ರ
7. ಪೋಷಕರ ವಾರ್ಷಿಕ ವರಮಾನ 2.50 ಲಕ್ಷಕ್ಕಿಂತ ಹೆಚ್ಚಿನ ಆದಾಯ ಇರುವ ವಿದ್ಯಾರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪೋಷಕರ ಇತ್ತೀಚಿನ ವೇತನ ದೃಢೀಕರಣ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ.

ಪೂರ್ಣ ವಿವರಗಳಿಗಾಗಿ ದೂರವಾಣಿ ಸಂಖ್ಯೆ 0821-2543076 (ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ) ಸಂಪರ್ಕಿಸುವುದು.

JSS Technical Institutions Campus, Mysuru – 570 006, Karnataka.
Telephone: 91 – 821 – 2548285 / 86/ 91/ 93. Email: admn@sjce.ac.in. Website: www.sjce.ac.in.